ಇ) ಈ ರೀತಿ ಹಣ ಸಮನಾಗಿ 3 ಹೋಬಳಿಗಳಿಗೆ ಖರ್ಚು ಮಾಡದೆ ವ್ಯತ್ಯಾಸ ಮಾಡಲು ಕಾರಣವೇನು?

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮೀಣ ಅಭಿವೃದ್ಧಿ ಮತ್ತು ಪಂ.ರಾಜ್ ಸಚಿವರು):

ಅ) ಸರ್ಕಾರವು ಜಿಲ್ಲಾ ಪಂಚಾಯತ್, ಇಂಜಿನಿಯರಿಂಗ್ ವಿಭಾಗಗಳಿಗೆ ನೇರವಾಗಿ ಹಣವನ್ನು ಬಿಡುಗಡೆ ಮಾಡುವುದಿಲ್ಲ ಮತ್ತು ಈ ಹಣವನ್ನು ಜಿಲ್ಲಾಪಂಚಾಯತಿಗಳ ಮೂಲ ಬಿಡುಗಡೆ ಮಾಡಲಾಗುವುದು.

ಆ) ಬೆಂಗಳೂರು ಜಿಲ್ಲೆ ನೆಲಮಂಗಲ ತಾಲ್ಲೂಕು ಜಿಲ್ಲಾ ಪರಿಷತ್ ಇಂಜಿನಿಯರಿಂಗ್ ಉಪ ವಿಭಾಗಕ್ಕೆ ಅಭಿವೃದ್ಧಿ ಕಾರ್ಯಗಳಿಗೆ ಬೆಂಗಳೂರು ಜಿಲ್ಲಾ ಪರಿಷತ್ 90-91 ರಿಂದ 93-94ರವರೆಗೆ ಕೆಳಕಂಡಂತೆ ಬಿಡುಗಡೆ ಮಾಡಿದೆ.

(ರೂ.ಲಕ್ಷಗಳಲ್ಲಿ)

1990-91	48.51
1991-92	44.97
1992-93	58.66
1993-94	39.28

ಅಭಿವೃದ್ಧಿ ಕಾರ್ಯಗಳಿಗೆ ಹೋಬಳಿವಾರು ಮಾಡಿದ ವೆಚ್ಚವನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) ನೆಲ ಮಂಗಲ ತಾಲ್ಲೂಕು ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗದಲ್ಲಿ ಅಗತ್ಯ ಅಭಿವೃದ್ಧಿ ಕಾರ್ಯಕ್ರಮಗಳನ್ನು ಜಿಲ್ಲಾಪಂಚಾಯತಿಯು ಅನುಮೋದಿಸಿದೆ ಕ್ರಿಯಾ ಯೋಜನೆ ಪಟ್ಟಿಯಂತೆ ಕಾಮಗಾರಿಯ ಪ್ರಗತಿಯನ್ನು ಗಮನದಲ್ಲಿರಿಸಿಕೊಂಡು ವೆಚ್ಚ ಮಾಡಲಾಗಿದೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 306
ಅನುಬಂಧ

ಹೋಬಳಿಗಳು	1990-91	1991-92	1992-93	1993-94 (ಜನವರಿ 94ರವರೆಗೆ)
1. ತ್ಯಾಮಗೊಂಡಲು	18.42	13.46	23.78	17.09
2. ಸೋಂಪುರ	15.61	10.64	11.99	7.36
3. ಕಸಬಾ ಹೋಬಳಿ	14.48	20.87	22.89	14.83
	48. 51	44.97	58.66	39.28

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಮಾನ್ಯ ಅಧ್ಯಕ್ಷರೇ ದಿನಾಂಕ 17-2-94ರ ಲಿಖಿತ ಮೂಲಕ ಉತ್ತರಿಸುವ 8ನೇ ಪಟ್ಟಿಯಲ್ಲಿರುವ 16 ಪ್ರಶ್ನೆಗಳ ಪೈಕಿ ಪ್ರಶ್ನೆಗಳ ಸಂಖ್ಯೆ 134, 267, 2 85, 382 ಪ್ರಶ್ನೆಗಳನ್ನು ಹೊರತುಪಡಿಸಿ ಇನ್ನುಳಿದ 8 ಚುಕ್ಕೆ ಗುರುತಿಲ್ಲದ ಪ್ರಶ್ನೆಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.